

ಪ್ರಾಧ್ಯಾಪಕರು 'ಏನ್ ಯಡಾಂಬ ಸಾಹಿತಿಗಳು ಬಹಳ ಸಂತೋಷದಲ್ಲಿದ್ದೀರಿ ಅಂತ ಕಾಣುತ್ತೆ' ಅಂದದ್ದೇ ತಡ, ತನ್ನ ಬಾಳಲ್ಲಿ ಒಬ್ಬರಾದರೂ ನನ್ನನ್ನೂ 'ಸಾಹಿತಿ' ಅಂದರಲ್ಲಾ ಅನ್ನೋ ಖುಷಿಯಲ್ಲಿ 'ನೋಡಿ ಪ್ರೊಫೆಸರ್, ಸಾಹಿತ್ಯ-ರಂಗಭೂಮಿ-ವಿಜ್ಞಾನ ಒಂದೇ ತಂದೆ-ತಾಯಿಗುಟ್ಟಿದ ಮಕ್ಳು ತರ. ಇವು ಒಂದನ್ನ ಬಿಟ್ಟು ಒಂದು ಇರಂಗಿಲ್ಲ. ಈಗ ನೋಡಿ...' ಎಂದವರೆ, ಇತ್ತೀಚೆಗಷ್ಟೇ ಕಲಿತಿದ್ದ 'ಕುರುಕ್ಷೇತ್ರ' ನಾಟಕದ ಅಭಿಮನ್ಯು-ಉತ್ತರೆಯ ಡ್ಯುಯಟ್ ಸಾಂಗ್ ಒಂದನ್ನು ಗಟ್ಟಿಯಾಗಿ ಹಾಡುತ್ತಾ ಮೂರು ದಶಕಗಳಿಂದ ಬಹಳ ಪ್ರೀತಿಯಿಂದ ಸಾಕಿಕೊಂಡಿದ್ದ ತಮ್ಮ ದುಂಡನೆಯ ಹೊಟ್ಟೆಯನ್ನು ತಿರುಗಿಸುತ್ತಾ ನುಲಿಯುತ್ತಿದ್ದರು. ಇದೇ ವೇಳೆಗೆ ಅವರ ಪ್ರಿಯ ಸಿಸ್ಯ ಶೇಖರಿಯು ಬಂದು ತನ್ನ ಮೊಬೈಲ್ ಕ್ಯಾಮೆರಾದಲ್ಲಿ ಅದನ್ನು ಸೆರೆಹಿಡಿಯುತ್ತಾ 'ಅಬ್ಬ..!! ಸೂಪರ್ ಅಪ್ಪಾಜಿ, ಸೂಪರ್...' ಅನ್ನುತ್ತಾ ಗುರುಗಳನ್ನು ಹುರಿದುಂಬಿಸಿದ. ಅಲ್ಲಿ ನಾಲ್ಕಾರು ಸಂಶೋಧನಾರ್ಥಿಗಳೂ ಸೇರಿ ವಿಶ್ವವಿದ್ಯಾನಿಲಯದ ವಿಭಾಗವೊಂದರ ಕಾರಿಡಾರ್ ಕ್ಷಣಹೊತ್ತಲೇ ಮಿನಿ ಬಯಲು ರಂಗಮಂದಿರವಾಗಿ ಬದಲಾಯಿತಲ್ಲೋ ಸಿವ ಸಿವನೇ...

ಆ ಡ್ಯುಯೆಟ್ ಸಾಂಗಿಗೆ ತಕ್ಕ ಜೊತೆ ಇಲ್ಲದೆ ಪರದಾಡುತ್ತಿದ್ದ ಗುರುಗಳ ಗೊಂದಲವನ್ನು ಅರಿತ ಮಾನಸ ಸಿಸ್ಯ-ಭಕ್ತಾಗ್ರೇಸರ ಶೇಖರಿಯು ಈ ವೈಭೋಗವ ನೋಡಿ ಹೊಟ್ಟೆ ಹಿಡಿದು ನಗುತ್ತಿದ್ದ,